PW-1 : ರಾಮಾಂಜಿ

ದಿನಾಂಕಃ **03.09.2024** ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನವನ್ನು ಭೋದಿಸಲಾಯಿತು.

**ಮುಂದುವರಿದ ಪಾಟೀ ಸವಾಲುಃ ಪ್ರತಿವಾದಿ ಪರವಾಗಿ ಶ್ರೀ. ಎಸ್.ಆರ್.ವಿ. ವಕೀಲರಿಂದಃ**

ನಮ್ಮ ತಾತನ ಹೆಸರು ಚಿನ್ನಯ್ಯ ಎಂದರೆ ಸರಿ. ಚಿನ್ನಯ್ಯನ ತಂದೆಯ ಹೆಸರು ಭೀಮಪ್ಪ ಎಂದರೆ ಸರಿ. ಚಿನ್ನಯ್ಯ ರವರಿಗೆ ಭೀಮಪ್ಪ, ಗುರ್ರಪ್ಪ ಮತ್ತು ಸುಬ್ಬಯ್ಯ 3 ಜನ ಮಕ್ಕಳು ಎಂದರೆ ಸರಿ. ಸುಬ್ಬಯ್ಯ ನನ್ನ ತಂದೆ ಎಂದರೆ ಸರಿ. ಸ.ನಂ. 25/2, 30/1, 40/5, 139 ರ ಪಹಣಿ ಪತ್ರಿಕೆಗಳಲ್ಲಿ ನನ್ನ ತಂದೆಯ ಹೆಸರು ಸುಬ್ಬಯ್ಯ ಎಂದು ಬರುತ್ತಿದೆ ಎಂದರೆ ನನಗೆ ಗೊತ್ತಿಲ್ಲ. ಸ.ನಂ. 25/2, 30/1, 40/5, 139, 40/2, 47, 55, 51 ರ ಸ್ವತ್ತುಗಳಿಗೆ ಸಂಬಂಧಿಸಿದಂತೆ ಈ ದಾವೆಯನ್ನು ಸಲ್ಲಿಸಿದ್ದೇನು ಎಂದರೆ ಸಾಕ್ಷಿಯು ತಿಳಿಯದೇ ಸಲ್ಲಿಸಿದ್ದೇನು ಎಂದು ನುಡಿಯುತ್ತಾರೆ. ಆ ನಂತರ ಈ ದಾವೆಯನ್ನು ಸಲ್ಲಿಸಲಾಗಿದೆ ಎಂದರೆ ಸರಿ. ಹಿಂದಿನ ದಾವೆಯನ್ನು ವಿಭಾಗಕ್ಕಾಗಿ ಸಲ್ಲಿಸಿದ್ದೇನು ಎಂದರೆ ಸರಿ. ಈ ಹಿಂದಿನ ದಾವೆಯ ವಾದಪತ್ರ ಮತ್ತು ಪ್ರತಿವಾದಪತ್ರವನ್ನು ಈ ದಾವೆಯಲ್ಲಿ ಹಾಜರುಪಡಿಸಿದ್ದೇನೆ. ನಾನು ಯಾವುದೇ ದಾಖಲೆಗಳನ್ನು ಹಾಜರುಪಡಿಸದೇ ಸುಳ್ಳು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಸದರಿ ದಾವೆಯಲ್ಲಿ ದಾವಾ ಸ್ವತ್ತಿನ ಪಹಣಿ ಹಾಜರುಪಡಿಸಿದ್ದೇನೆ ಎಂದರೆ ಸರಿ. ಆ ದಾವೆ ಸಲ್ಲಿಸಿದ ಸಂದರ್ಭ ಸುಬ್ಬಯ್ಯ ರವರ ಹೆಸರು ಮೇಲ್ಕಂಡ ಸರ್ವೇ ನಂಬರ್ ಗಳಲ್ಲಿ ದಾಖಲಾಗಿತ್ತು ಎಂದರೆ ಸರಿಯಲ್ಲ. ನನಗೆ ಎಲ್ಲಾ ವಿಚಾರಗಳು ಗೊತ್ತಿದ್ದರೂ ಸುಳ್ಳು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಗುರ್ರಪ್ಪ ರವರ ಮಗ ವೆಂಕಟೇಶಪ್ಪ ರವರ ಹೆಂಡತಿ ಅಚ್ಚಮ್ಮ ರವರು ಮೃತಪಟ್ಟಿರುತ್ತಾರೆ ಎಂದರೆ ಸರಿ. ಪ್ರತಿವಾದಿ 9 ಮತ್ತು 10 ರವರು ಆಕೆಯ ಮಕ್ಕಳು ಎಂದರೆ ಸರಿ. ಆಕೆಯ ಸಮಾಧಿ ಸ.ನಂ. 51 ರಲ್ಲಿ ಇದೆ ಎಂದರೆ ನನಗೆ ಗೊತ್ತಿಲ್ಲ.

2011 ಮತ್ತು 2012 ರಲ್ಲಿ ನಮ್ಮ ಕುಟುಂಬದಲ್ಲಿ ಸುಮಾರು 45 ರಿಂದ 50 ಜನ ಇದ್ದರು ಎಂದರೆ ಗೊತ್ತಿಲ್ಲ. ಸ.ನಂ. 51 ರಲ್ಲಿ ಇರುವ 2 ಮನೆಗಳಲ್ಲಿ ಮೇಲ್ಕಂಡ ಎಲ್ಲಾ ಕುಟುಂಬದ ಸದಸ್ಯರು ವಾಸವಿದ್ದರು ಎಂದರೆ ನನಗೆ ಗೊತ್ತಿರುವುದಿಲ್ಲ. 2011 ಮತ್ತು 2012 ರಿಂದ ಮನೆಯಲ್ಲಿ ಹೆಂಗಸರ ನಡುವೆ ಹೊಂದಾಣಿಕೆ ಇಲ್ಲದ ಕಾರಣ ಕೇವಲ ಮನೆಗಳನ್ನು ಮಾತ್ರ ಪ್ರತ್ಯೇಕವಾಗಿ ಮಾಡಲಾಗಿರುತ್ತದೆ ಎಂದರೆ ಗೊತ್ತಿಲ್ಲ. ಸ.ನಂ. 51 ಮತ್ತು 55 ರ ಕಂದಾಯ ದಾಖಲೆಗಳು ಗುರ್ರಪ್ಪ ರವರ ಮಕ್ಕಳ ಹೆಸರಿಗೆ ಮತ್ತು ನಮ್ಮ ತಾತ ಮತ್ತು ನಮ್ಮಗಳ ಹೆಸರಿಗೆ ನಮೂದಾಗಿದೆ ಎಂದರೆ ಗೊತ್ತಿಲ್ಲ. ನನ್ನ ವಾದಪತ್ರದಲ್ಲಿ ಆ ರೀತಿ ಕಂದಾಯ ದಾಖಲೆಗಳು ಜಂಟಿಯಾಗಿ ನಮೂದಾಗಿರುವ ಬಗ್ಗೆ ಬರೆಸಿದ್ದೇನೆ ಎಂದರೆ ಸರಿಯಲ್ಲ. ಸ.ನಂ. 51 ಮತ್ತು 55 ರಲ್ಲಿ ಭೀಮಪ್ಪ ಮತ್ತು ಗುರ್ರಪ್ಪ ರವರ ಮಕ್ಕಳು ಮತ್ತು ಮೊಮ್ಮಕ್ಕಳಿಗೆ ಭಾಗ ಇದ್ದು ಎಲ್ಲರೂ ಒಟ್ಟಾರೆಯಾಗಿ ಸ್ವತ್ತುಗಳನ್ನು ಅನುಭವಿಸುತ್ತಿದ್ದಾರೆ ಎಂದರೆ ಸರಿಯಲ್ಲ. 4 ನೇ ಪ್ರತಿವಾದಿಯನ್ನು ಹೊರತುಪಡಿಸಿ ಭೀಮಪ್ಪ ಮತ್ತು ಗುರ್ರಪ್ಪ ರವರ ವಾರಸುದಾರರು ಜಂಟಿಯಾಗಿ ಸ್ವಾಧೀನಾನುಭವದಲ್ಲಿದ್ದಾರೆ ಎಂದರೆ ಸರಿಯಲ್ಲ. ವಿಭಾಗದಂತೆ ನಮ್ಮ ಮುತ್ತಾತ ಭೀಮಪ್ಪ ರವರ ಹೆಸರಿಗೆ ಮುಟೇಷನ್ ಆಗಿರುವುದಿಲ್ಲ ಆದರೆ ಕೇತುವಾರು ಪತ್ರಿಕೆ ಆಗಿರುತ್ತದೆ. ಕೇತುವಾರು ಪತ್ರಿಕೆಯಲ್ಲಿ ವಿಭಾಗ ಎಂದು ತೋರಿಸಿಲ್ಲ ಎಂದರೆ ಸರಿಯಲ್ಲ. ಭೀಮಪ್ಪ ಮತ್ತು ಗುರ್ರಪ್ಪ ರವರ ಮಕ್ಕಳ ನಡುವೆ ಸ.ನಂ. 51 ಮತ್ತು 55 ಕ್ಕೆ ಸಂಬಂಧಿಸಿದಂತೆ ವಿಭಾಗ ಆಗಿರುವುದಿಲ್ಲ ಎಂದರೆ ಸರಿ. ಯಾವುದೇ ವಿಭಾಗವಾಗದೇ ಇದ್ದರೂ ಪ್ರತಿವಾದಿಗಳಿಗೆ ಹಕ್ಕು ಇಲ್ಲ ಎಂದು ಸುಳ್ಳು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಸ.ನಂ. 51 ಮತ್ತು 55 ರಲ್ಲಿ ಭೀಮಪ್ಪ ಮತ್ತು ಗುರ್ರಪ್ಪ ರವರ ವಾರಸುದಾರರು ಸ್ವಾಧೀನದಲ್ಲಿ ಇದ್ದಾರೆ ಎಂದರೆ ಸರಿಯಲ್ಲ. ನನಗೆ ಯಾವುದೇ ಹಕ್ಕು ಹಿತಾಸಕ್ತಿ ಇಲ್ಲದೇ ಇದ್ದರೂ ಸುಳ್ಳು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆಃ** ಇಲ್ಲ.

**(ನನ್ನ ಉಕ್ತಲೇಖನ ಹೇಳಿಕೆಯಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.)**

ಓ.ಹೇ.ಕೇ.ಸರಿ ಇದೆ.

ಹಿರಿಯ ಸಿವಿಲ್ ಜಡ್ಜ್ ಮತ್ತು ಜೆಎಂಎಫ್.ಸಿ.

ಪಾವಗಡ.